

# ನೆನಪುಗಳ ಸುಳಿಯಲ್ಲಿ ಸೂರ್ಯ

ಇದನ್ನರಿತ ಸೂರ್ಯ, ಭೂಮಿ ಆಕಾಶ ಒಂದು ಮಾಡುವಂತೆ ಅರಚಾಡಿದ. 'ನಾನು ಈ ಮನೆ ಬಿಟ್ಟು, ನಿನ್ನನ್ನು ಬಿಟ್ಟು ಎಲ್ಲಿಗೂ ಹೋಗಲ್ಲ...' ಅವನ ಅರಚಾಟ, ಕಣ್ಣೀರು, ಉಪವಾಸ ಯಾವುದಕ್ಕೂ ಹೆತ್ತವರು ಬಗ್ಗದಾಗ ಸೂರ್ಯ ಸೋಲಲೇಬೇಕಾಯಿತು.

ಸೂರ್ಯನನ್ನು ಹೈಸ್ಕೂಲಿಗೆ ಉಡುಪಿಯ ರೆಸಿಡೆನ್ಶಿಯಲ್ ಶಾಲೆಯಲ್ಲಿ ದಾಖಲಿಸಲಾಯಿತು. ಸೂರ್ಯನಿಗೆ ಅಲ್ಲಿಯ ವಾತಾವರಣಕ್ಕೆ ಒಗ್ಗಿಕೊಳ್ಳಲು ಬಹಳ ಕಷ್ಟವಾಗತೊಡಗಿತ್ತು. ಬೆಳಿಗ್ಗೆ ಐದಕ್ಕೆದ್ದು ಗ್ರೌಂಡಿಗೆ ಮೂರು ಸುತ್ತು ಹೊಡೆಯಬೇಕಿತ್ತು. ತಡವಾದರೆ ದಂಡದ ರೂಪದಲ್ಲಿ ಮತ್ತೆ ಮೂರು ಸುತ್ತು! ಆನಂತರ ಸ್ನಾನ, ಕ್ಯಾಂಟೀನಿನಲ್ಲಿ ಉಪಾಹಾರ, ಮತ್ತೆ ಶಾಲೆಯ ಬಸ್ಸಿನಲ್ಲಿ ಎಂಟಕ್ಕೆಲ್ಲಾ ಶಾಲೆಯಲ್ಲಿರಬೇಕಾಗಿತ್ತು. ಸಂಜೆ ಹಿಂದಿರುಗಿದ ಬಳಿಕ  ಆಟ, ತಿಂಡಿ, ಮತ್ತೆ ಓದು, ರಾತ್ರೆ ಊಟ ಒಂಬತ್ತಕ್ಕೆಲ್ಲಾ ನಿದ್ದೆ. ಹೊಸ ಜೀವನ ಕ್ರಮಕ್ಕೆ ಒಗ್ಗಿಕೊಳ್ಳಲು ಸೂರ್ಯ ಪರದಾಡಿದ. ಸ್ವತಂತ್ರ ಹಕ್ಕಿಯಂತೆ ಬೆಂಗಳೂರಿನಲ್ಲಿ ಜೀವಿಸುತ್ತಿದ್ದ ಸೂರ್ಯನಿಗೆ ಹಾಸ್ಟೆಲ್ ಜೀವನ ಜೈಲು ವಾಸದಂತಾಗಿತ್ತು. ಹೊರಗೆ ಒಂಟಿಯಾಗಿ ತಿರುಗಾಡಲು ಅವಕಾಶವೇ ಇರಲಿಲ್ಲ. ಹಾಸ್ಟೆಲ್ ಒಳಗೆ ಹೊಕ್ಕನೆಂದರೆ ಹೊರಗಿನ ಗೇಟು ಬಂದ್ ಆಗಿ ಬಿಡುತ್ತಿತ್ತು. ದ್ವಾರಪಾಲಕರು ಅಲ್ಲಿ ಕಾವಲು ಕಾಯುತ್ತಿದ್ದು ಅನುಮತಿ ಇಲ್ಲದೇ ಯಾರಿಗೂ ಪ್ರವೇಶವೂ ದೊರಕುತ್ತಿರಲಿಲ್ಲ. ಹೊರ ಹೋಗುವ